ಕರ್ನಾಟಕ ಸರ್ಕಾರ

ಅರಣ್ಯ ಇಲಾಖೆ

ಸಂಖ್ಯೆ:ಎ6/ಅಸಂಕಾ/ಸಿಆರ್-34/2016-17

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ,
ಚಿತ್ರದುರ್ಗ ವಿಭಾಗ, ಚಿತ್ರದುರ್ಗ,
ದಿನಾಂಕ: 30-12-2016.

ಇವರಿಗೆ,

ಕಾರ್ಯಪಾಲಕ ಇಂಜಿನಿಯರ್,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ,
ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ.

ಮಾನ್ಯರೆ,

ವಿಷಯ : ಚಿತ್ರದುರ್ಗ ಜಿಲ್ಲೆ, ಹಿರಿಯೂರು ತಾಲ್ಲೂಕು ಐಮಂಗಲ ಹಾಗೂ 37 ಇತರೆ ಹಳ್ಳಿಗಳಿಗೆ ಕುಡಿಯುವ ನೀರಿನ ಯೋಜನೆ ಕಾಮಗಾರಿಗೆ ಅರಣ್ಯ ಭೂಮಿಯನ್ನು ಮಾರ್ಪಡಿಸುವ ಬಗ್ಗೆ.

ಉಲ್ಲೇಖ : 1. ತಮ್ಮ ಕಛೇರಿ ಪತ್ರ ಸಂಖ್ಯೆ: ಕಾಇಂ/ಗ್ರಾನೀಸ&ನೈವಿ/ಚಿವಿ/ಸಿಂ-3/ 2016-17/1218 ದಿನಾಂಕ: 07.11.2016.

2.ಈ ಕಛೇರಿ ಸಮ ಸಂಖ್ಯೆ ಪತ್ರ ದಿನಾಂಕ: 16-11-2016 ಮತ್ತು 16-12-2016.

<><><><>

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ (1) ರ ಮನವಿಯಲ್ಲಿ ನೀವು ಅರಣ್ಯ ಸಂರಕ್ಷಣಾ ಕಾಯ್ದೆ-1980 ರ ಪ್ರಸ್ತಾವನೆಗೆ ಸಂಬಂಧಿಸಿದಂತೆ, ಸರ್ವೆ ನಂಬರುವಾರು ವಿಸ್ತೀರ್ಣವನ್ನು ನಕಾಶೆಗಳಲ್ಲಿ ಗುರುತಿಸಿ ಅಗತ್ಯ ದಾಖಲೆಗಳನ್ನು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಹಿರಿಯೂರು ಉಪ-ವಿಭಾಗ, ಹಿರಿಯೂರು ಇವರಿಗೆ ಸಲ್ಲಿಸಲು ಉಲ್ಲೇಖ (2) ರ ಈ ಕಛೇರಿ ಪತ್ರಗಳಲ್ಲಿ ಸೂಚಿಸಲಾಗಿತ್ತು.ಈ ಬಗ್ಗೆ ನೀವು ಮಾಹಿತಿಯನ್ನು ದಾಖಲೆಗಳೊಂದಿಗೆ ಸಲ್ಲಿಸದೇ ಇರುವುದು ಕಂಡುಬರುತ್ತದೆ.

ಸರ್ವೆ ನಂಬರುವಾರು ವಿಸ್ತೀರ್ಣವನ್ನು ನಕಾಶೆಗಳಲ್ಲಿ ಗುರುತಿಸಿ ಸಲ್ಲಿಸದೇ ಇರುವುದರಿಂದ ನಿಮ್ಮ ಪ್ರಸ್ತಾವನೆಯನ್ನು ಭೌತಿಕವಾಗಿ ಪರಿಶೀಲಿಸಲು ಸಾದ್ಯವಾಗದೇ ಇರುತ್ತದೆ. ಆದ್ದರಿಂದ, ನಿಮ್ಮಿಂದ ಉಲ್ಲೇಖ (2) ರ ಈ ಕಛೇರಿ ಪತ್ರಗಳಲ್ಲಿ ಕೇಳಲಾದ ಮಾಹಿತಿ ದಾಖಲೆಗಳೊಂದಿಗೆ ಸಲ್ಲಿಕೆಯಾದ ನಂತರ ಅರಣ್ಯ ಸಂರಕ್ಷಣಾ ಕಾಯ್ದೆ-1980 ರ ಪ್ರಸ್ತಾವನೆಯನ್ನು ಮುಂದುವರಿಸಲು ಕ್ರಮವಹಿಸಲಾಗುವುದು ಎಂಬ ವಿಷಯವನ್ನು ನಿಮ್ಮ ತುರ್ತು ಗಮನಕ್ಕೆ ತಂದು ಈ ಪ್ರಾಧಿಕಾರದಿಂದ ನಿಮ್ಮ ಪ್ರಸ್ತಾವನೆಯನ್ನು ಹಿಂದಿರುಗಿಸಿದೆ.

ತಮ್ಮ ವಿಶ್ವಾಸಿ,
ಸಹಿ/-
ಉಪ ಅರಣ್ಯ ಸಂರಕ್ಷಣಾಧಿಕಾರಿ,
ಚಿತ್ರದುರ್ಗ ವಿಭಾಗ, ಚಿತ್ರದುರ್ಗ.

**ಪ್ರತಿಯನ್ನು** ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, (ಅರಣ್ಯ ಸಂರಕ್ಷಣೆ), ಅರಣ್ಯ ಭವನ, ಬೆಂಗಳೂರು ಇವರ ಅವಗಾಹನೆಗೆ ಗೌರವಗಳೊಂದಿಗೆ ಸಲ್ಲಿಸಿದೆ.

**ಪ್ರತಿಯನ್ನು** ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಬಳ್ಳಾರಿ ವೃತ್ತ, ಬಳ್ಳಾರಿ ಇವರ ಅವಗಾಹನೆಗೆ ಗೌರವಗಳೊಂದಿಗೆ ಸಲ್ಲಿಸಿದೆ.

ರವಾನಿಸಿದೆ
21/1/17

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಚಿತ್ರದುರ್ಗ ವಿಭಾಗ, ಚಿತ್ರದುರ್ಗ.

324